**Karnataka State Diploma In Nursing Examination Board**
First Floor, Library Block, BMC&RI Campus, K.R.Road, Bengaluru-560002
**Ph No:** 080-26700074, 26700075 **Email:** ksdneb@gmail.com

ಕ.ರಾ.ಶು.ಪ.ಮಂ/ಸಿಬ್ಬಂದಿ/ 69 / 2024-25 ದಿನಾಂಕ: 24-03-2025

ವಿಷಯ: 2024-25 ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಜಿ.ಎನ್.ಎಮ್. ತರಬೇತಿಗೆ ಸೇವಾನಿರತ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು (ಎ.ಎನ್.ಎಮ್.) ಇವರಿಗೆ ಹಂಚಿಕೆ ಮಾಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ ಎಂಇಡಿ 407 ಆರ್‌ಐ 2024, ದಿನಾಂಕ: 17-03-2025.

******

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಆದೇಶಿಸಿರುವಂತೆ 2024-25 ನೇ ಸಾಲಿನಲ್ಲಿ ಶೈಕ್ಷಣಿಕ ಸಾಲಿನಲ್ಲಿ ಮೂರು ವರ್ಷಗಳ ಡಿಪ್ಲೋಮಾ ಇನ್ ನರ್ಸಿಂಗ್ ಕೋರ್ಸ್‌ಗಾಗಿ ಎಲ್ಲಾ ವರ್ಗಗಳಲ್ಲಿ ಉಳಿಕೆಯಾಗಿರುವ ಸೀಟುಗಳನ್ನು ಅಂತಿಮ ಸುತ್ತಿನಲ್ಲಿ 'Decategorize' ಮಾಡಿ ಸಾಮಾನ್ಯ ವರ್ಗದ (ಜಿ.ಎಮ್) ಅಭ್ಯರ್ಥಿಗಳಿಗೆ ಹಂಚಿಕೆ ಮಾಡಿದ್ದು, ಸಾಮಾನ್ಯ ಕೋಟಾಗೆ 'Decategorize' ಮಾಡಿದ ನಂತರವೂ 2024-25 ನೇ ಸಾಲಿನಲ್ಲಿ ಕೌನ್ಸಿಲಿಂಗ್ ಮುಕ್ತಾಯವಾದ ನಂತರ ಉಳಿಕೆಯಾಗಿರುವ 9 ಸರ್ಕಾರಿ ಶುಶ್ರೂಷಾ ಶಾಲೆಗಳಲ್ಲಿನ 18 ಜಿ.ಎನ್.ಎಮ್. ಸೀಟುಗಳಿಗೆ ಸೇವಾನಿರತ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರಿಗೆ (ಎ.ಎನ್.ಎಮ್.) ಹಂಚಿಕೆ ಮಾಡಲು ಆದೇಶಿಸಲಾಗಿರುತ್ತದೆ.

ಸದರಿ ಸರ್ಕಾರದ ಆದೇಶದಂತೆ 2024-25 ನೇ ಸಾಲಿನಲ್ಲಿ ಕೌನ್ಸಿಲಿಂಗ್ ಮುಕ್ತಾಯವಾದ ನಂತರ ಉಳಿಕೆಯಾಗಿರುವ 9 ಸರ್ಕಾರಿ ಶುಶ್ರೂಷಾ ಶಾಲೆಗಳಲ್ಲಿನ 18 ಜಿ.ಎನ್.ಎಮ್. ಸೀಟುಗಳಿಗೆ ಸೇವಾನಿರತ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರಿಗೆ (ಎ.ಎನ್.ಎಮ್.) ಹಂಚಿಕೆ ಮಾಡಲು ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ದಿನಾಂಕ: 26-03-2025 ರಂದು ಬೆಳಗ್ಗೆ 11.30 ಗಂಟೆಗೆ ನಡೆಸಲಾಗುವುದು. ಸದರಿ ಕೌನ್ಸಿಲಿಂಗ್ ಪ್ರಕ್ರಿಯೆಗೆ ಸೀಟುಗಳಿಗೆ ಅರ್ಹವುಳ್ಳ ಅಭ್ಯರ್ಥಿಗಳು ಮಾತ್ರ ಸಂಬಂಧಪಟ್ಟ ಮೂಲದಾಖಲಾತಿಗಳೊಂದಿಗೆ ಭಾಗವಹಿಸತಕ್ಕದ್ದು. ಅಭ್ಯರ್ಥಿಗಳು ಶುಶ್ರೂಷ ಶಾಲೆಯಲ್ಲಿ ಲಭ್ಯವಿರುವ ಸೀಟುಗಳನ್ನು ಗಮನಿಸಿ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸತಕ್ಕದ್ದು.

**ಕೌನ್ಸಿಲಿಂಗ್‌ಗೆ ಆಯ್ಕೆಯಾಗಿರುವ ಅರ್ಹ ಅಭ್ಯರ್ಥಿಗಳು ಈ ಕೆಳಕಂಡ ಮೂಲದಾಖಲಾತಿಗಳನ್ನು ಕಡ್ಡಾಯವಾಗಿ ತರತಕ್ಕದ್ದು.**

1. ಮೂಲ ಅಂಕಪಟ್ಟಿಗಳು (ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ (10+2))
2. ಕಿ.ಮ.ಆ.ಸ.ತರಬೇತಿ ಪ್ರಮಾಣ ಪತ್ರ
3. ಜಾತಿ ಮತ್ತು ಆದಾಯ ಪ್ರಮಾಣ ಪತ್ರ (ಎಸ್.ಸಿ ಎಸ್.ಟಿ)
4. ನೇಮಕಾತಿ ಪ್ರಮಾಣ ಪತ್ರ
5. ಹೈದ್ರಾಬಾದ್-ಕರ್ನಾಟಕ ಮೀಸಲಾತಿ ಅಡಿಯಲ್ಲಿ ಪ್ರವೇಶ ಬಯಸಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ
6. ಕೆ.ಎಸ್.ಎನ್.ಸಿ ನೊಂದಣಿ ಪ್ರಮಾಣ ಪತ್ರ
7. ಕರ್ತವ್ಯಕ್ಕೆ ಹಾಜರಾದ ಚಲನಾದೇಶ ಪ್ರತಿ
8. ಖಾಯಂ ಪೂರ್ವ ಸೇವಾವಧಿ ಘೋಷಣೆ ಪತ್ರ
9. ಸದರಿ ನೌಕರರ ಬಗ್ಗೆ ಇಲಾಖಾ ವಿಚಾರಣೆಗಳ/ನ್ಯಾಯಾಂಗ ವಿಚಾರಣೆ ಬಾಕಿ ಇರುವುದಿಲ್ಲವೆಂದು ಧೃಢೀಕರಣ ಪತ್ರ
10. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ನಿರಪೇಕ್ಷಣಾ ಪತ್ರ.

**ಮುಂದುವರೆದಿದೆ....**

Scanned with OKEN Scanner

**ಈ ಕೆಳಕಂಡ ಪಟ್ಟಿಯಲ್ಲಿ ತಿಳಿಸಿರುವಂತೆ ಸರ್ಕಾರಿ ಶುಶ್ರೂಷಾ ಶಾಲೆಗಳಲ್ಲಿ ಸೀಟುಗಳು ಉಳಿಕೆಯಾಗಿರುತ್ತವೆ.**

**GNM Remaining seats**

| SL.NO. | Name of the School | GNM |
|---|---|---|
| 1 | Govt. School of Nursing, Chamarajanagar | 1 |
| 2 | Govt. School of Nursing, Karwar | 1 |
| 3 | Govt. School of Nursing, K C G Hospital, Bengaluru | 1 |
| 4 | Govt. School of Nursing, District Hospital, Gulbarga | 6 |
| 5 | Govt. School of Nursing, K R Hospital Mysore | 1 |
| 6 | Govt.School of Nursing, Victoria Hospital, Bengaluru | 4 |
| 6 | Govt. School of Nursing, District Hospital, Tumkur | 1 |
| 7 | Govt. School of Nursing, District Hospital, Haveri | 1 |
| 8 | Govt. School of Nursing, BIMS Hospital, Belagavi | 1 |
| 9 | Govt. School of Nursing, Bowring and Lazy Curzeon Hospital, Bengaluru | 1 |
| | **Total** | **18** |

ಕೌನ್ಸಿಲಿಂಗ್ ಆಯ್ಕೆ ಪ್ರಕ್ರಿಯೆಯನ್ನು KARNATAKA STATE DIPLOMA IN NURSING EXAMINATION BOARD, 1st Floor, Library Block, Bangalore Medical College & Research Institute Campus, K.R.Road, Bengaluru-02 ರಲ್ಲಿ ನಡೆಸಲಾಗುವುದು.

**ವಿಶೇಷ ಸೂಚನೆ: ಈಗಾಗಲೇ ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ಸೀಟುಗಳನ್ನು ಪಡೆದುಕೊಂಡು ಪ್ರವೇಶವನ್ನು ಮಾಡಿಕೊಂಡಿರುವ ವಿದ್ಯಾರ್ಥಿಗಳಿಗೆ ಅವಕಾಶವಿರುವುದಿಲ್ಲ.**

24/3/25

ಕಾರ್ಯದರ್ಶಿಗಳು
ಕ.ರಾ.ಶು.ಪ.ಮಂ, ಬೆಂಗಳೂರು.

24/03/2025

ಪ್ರತಿಯನ್ನು ಇವರ ಮಾಹಿತಿಗಾಗಿ ಸಲ್ಲಿಸಿದೆ.
ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬಿ.ಎಂ.ಸಿ.ಆರ್.ಐ. ಬೆಂಗಳೂರು.

Scanned with OKEN Scanner